# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚನ್ನರಾಯಪಟ್ಟಣ.

## ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆ.

ರೈತರ ಸಾಮಾಜಿಕ ಭದ್ರತೆಗಾಗಿ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಹಾಗೂ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಸಂಯುಕ್ತವಾಗಿ ಜಾರಿಗೆ ತಂದಿರುವ ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆ.

### ಖ ) ಈ ಯೋಜನೆಯಲ್ಲಿ ನೀಡಲಾಗುವ ಗರಿಷ್ಠ ವಿಮಾ ಮೊತ್ತ:-

| ಕ್ರಮ ಸಂಖ್ಯೆ | ವಿವರಗಳು | ಗರಿಷ್ಠ ವಿಮಾ ಮೊತ್ತ: (ರೂ. ಗಳಲ್ಲಿ) |
|---|---|---|
| 1. | ಸಾವು ಉಂಟಾದಾಗ | 50,000-00 |
| 2. | ಎರಡು ಕೈಗಳು ಅಥವಾ ಎರಡು ಕಾಲುಗಳನ್ನು ಕಳೆದುಕೊಂಡಾಗ | 15,000-00 |
| 3. | ಎರಡು ಕಣ್ಣುಗಳನ್ನು ಕಳೆದುಕೊಂಡಾಗ | 12,000-00 |
| 4. | ಒಂದು ಕೈ ಅಥವಾ ಒಂದು ಕಾಲನ್ನು ಕಳೆದುಕೊಂಡಾಗ | 7,500-00 |
| 5. | ಒಂದು ಕಣ್ಣು ಕಳೆದುಕೊಂಡಾಗ | 6,000-00 |
| 6. | ಕೈ ಅಥವಾ ಕಾಲುಗಳ ಬೆರಳುಗಳನ್ನು ಕಳೆದುಕೊಂಡಾಗ ಪ್ರತಿ ಬೆರಳಿಗೆ | 1,500-00 |
| 7. | ಸೊಂಟ ಮುರಿದಾಗ | 15,000-00 |

### ಖಖ ) ಈ ಯೋಜನೆಯ ವ್ಯಾಪ್ತಿ:-

ಈ ಕೆಳಗಿನ ಸಂದರ್ಭಗಳಲ್ಲಿ ಸಾವು ಅಥವಾ ಅಂಗವಿಕಲತೆ ಉಂಟಾದಲ್ಲಿ ರಾಜ್ಯದಲ್ಲಿನ 15 ರಿಂದ 80 ವರ್ಷದೊಳಗಿನ ವಯೋಮಿತಿಯಲ್ಲಿರುವ ರೈತರು ಮತ್ತು ಆ ಕುಟುಂಬದ ಸದಸ್ಯರು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ.

1) ಕೃಷಿ ಜಮೀನಿನಲ್ಲಿ ಉಳುಮೆ ಮಾಡುವಾಗ, ಬಿತ್ತನೆ ಮಾಡುವಾಗ, ಕಳೆತೆಗೆಯುವಾಗ, ಬೆಳೆಗಳಿಗೆ ಗೊಬ್ಬರ, ಔಷಧಿ ಹಾಕುವಾಗ, ಕಟಾವು ಮಾಡುವಾಗ, ಒಣವೆ ಹಾಕುವಾಗ, ಹಾಗೂ ಕಣದಲ್ಲಿ ಉತ್ಪನ್ನಗಳನ್ನು ಒಕ್ಕಣೆ ಮಾಡುವಾಗ, ಗಾಡಿಗೆ ಲಾರಿಗೆ, ಟ್ರ್ಯಾಕ್ಟರ್ ಇತ್ಯಾದಿ ವಾಹನಗಳಿಗೆ ಉತ್ಪನ್ನಗಳನ್ನು ಹೇರುವಾಗ.

2) ಕೃಷಿ ಕಾರ್ಯದಲ್ಲಿ ನಿರತರಾಗಿದ್ದಾಗ ಭೂಸಾರವನ್ನು ಕಾಪಾಡಿಕೊಳ್ಳಲು ಪೂರೈಸುವ ಕೆರೆ ಗೊಬ್ಬರ, ಕೊಟ್ಟಿಗೆ: ಹಸಿರು ಎಲೆ ಗೊಬ್ಬರ, ಮಣ್ಣು ಮರಳು, ಕಾಡು-ಸೊಪ್ಪುಗಳು ಅಲ್ಲದೆ ಉಳುಮೆಗೆ ಬೇಕಾಗುವ ಸಲಕರಣೆಗಳನ್ನು ಮತ್ತು ಬೀಜ, ರಸಗೊಬ್ಬರ, ಕ್ರಿಮಿ ನಾಶಕಗಳು ಇತ್ಯಾದಿಗಳನ್ನು ಮನೆಯಿಂದ ಹೊಲಕ್ಕೆ, ಹೊಲದಿಂದ ಮನೆಗೆ ಮತ್ತು ಇಂತಹ ಸಾಮಾಗ್ರಿಗಳನ್ನು ಪಡೆಯುವ ಜಾಗದಿಂದ ಹೊಲಕ್ಕೆ ಸಾಗಿಸುವಾಗ ಮತ್ತು ವಾಪಸ್ಸು ಬರುವಾಗ ಯಾವುದೇ ರೀತಿಯ ಅಪಘಾತಗಳು ಸಂಭವಿಸಿದಲ್ಲಿ ದಾರಿಯಲಾಗಲಿ, ಜಲಮಾರ್ಗವು ಸೇರಿದಂತೆ ಆದಂತಹ ಅಪಘಾತಗಳು.
3) ಮುಖ್ಯ ಮಾರುಕಟ್ಟೆ ಪ್ರಾಂಗಣ, ಉಪ ಮಾರುಕಟ್ಟೆ ಪ್ರಾಂಗಣ, ಹಾಗೂ ಮಾರುಕಟ್ಟೆ ಉಪ ಪ್ರಾಂಗಣಗಳಲ್ಲಿ ಕೃಷಿ ಉತ್ಪನ್ನಗಳ ಮಾರಾಟ ಚಟುವಟಿಕೆಗಳಲ್ಲಿ ತೊಡಗಿದಾಗ.
4) ಕೃಷಿ ಉತ್ಪನ್ನಗಳನ್ನು ಮಾರಾಟಕ್ಕಾಗಿ ಮಾರುಕಟ್ಟೆಗಳಿಗೆ ಅಥವಾ ಸಂತೆಗಳಿಗೆ ಸಾಗಿಸುವಾಗ ಮತ್ತು ಮಾರುಕಟ್ಟೆಗಳಿಂದ ಅಥವಾ ಸಂತೆಗಳಿಂದ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಿ ಹಿಂತಿರುಗುವಾಗ ಸಂಭವಿಸಿದ ಅಪಘಾತಗಳು.
5) ಕೃಷಿಗಾಗಿ ಬಾವಿ, ಕೊಳವೆ ಬಾವಿ ತೋಡುವಾಗ ಹಾಗೂ ಸಂಬಂಧಿಸಿದಂತೆ ವಿದ್ಯುತ್ ಅಥವಾ ಇತರೇ ಸಲಕರಣೆಗಳನ್ನು ಜೋಡಣೆ ಮಾಡುವಾಗ.
6) ಕೃಷಿ ಜಮೀನಿನಲ್ಲಿ ಕಾರ್ಯ ಪ್ರವೃತ್ತರಾಗಿದ್ದಾಗ ಹಾವು, ಇತರೇ ವಿಷ ಜಂತು ಹಾಗೂ ಇತರೆ ಪ್ರಾಣಿಗಳಿಂದ ಕಡಿತ , ತುಳಿತ. ಒದೆತ ಅಥವಾ ಆಕ್ರಮಣದಿಂದ.
7) ಜಾನುವಾರುಗಳನ್ನು ಕಾಯುವಾಗ ಅಥವಾ ಅವುಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವಾಗ.
8) ಜಾನುವಾರುಗಳನ್ನು ಮಾರಾಟಕ್ಕಾಗಿ ಮಾರುಕಟ್ಟೆಗೆ ಅಥವಾ ಸಂತೆಗಳಿಗೆ ಸಾಗಿಸುವಾಗ ಹಾಗೂ ಜಾನುವಾರುಗಳನ್ನು ಮಾರಾಟ ಮಾಡಿ ಅಥವಾ ಸಂತೆಗಳಿಗೆ ಸಾಗಿಸುವಾಗ ಹಾಗೂ ಜಾನುವಾರುಗಳನ್ನು ಮಾರಾಟ ಮಾಡಿ ಅಥವಾ ಖರೀದಿಸಿ ವಾಪಸ್ಸು ಮನೆಗೆ ಹಿಂತಿರುಗುವಾಗ ಆದಂತಹ ಅಪಘಾತಗಳು ಮತ್ತು ಜಾನುವಾರುಗಳಿಗೆ ಆಹಾರ ನತ್ತು ನೀರು ಪೂರೈಸುವಾಗ ಅಲ್ಲದೆ ಮೈ ತೊಳೆಯುವಾಗ ಆದಂತಹ ಘಟನೆಗಳು.
9) ಕೃಷಿ ಮಾರುಕಟ್ಟೆಯಲ್ಲಿ ತೊಡಗಿದ್ದಾಗ ಅಥವಾ ಮಣ್ಣು ಫಲವತ್ತತೆಗೆ ವಿವಿಧ ಸಾಮಾಗ್ರಿಗಳನ್ನು ಕಲೆ ಹಾಕುವಾಗ ಅಥವಾ ಸಾಗಿಸುವಾಗ ಮರಗಳಿಂದ ಬಿದ್ದು ಸಂಭವಿಸಿದ ಅಪಘಾತಗಳು.

<u>ಖಖಖ) ಈ ಕೆಳಕಂಡ ಸಂದರ್ಭಗಳಲ್ಲಿ ಯೋಜನೆಯ ಪ್ರಯೋಜನವನ್ನು ಪಡೆಯಲು ಅನರ್ಹರಾಗಿರುತ್ತಾರೆ:-</u>

1) ಆತ್ಮಹತ್ಯೆ.
2) ಮದ್ಯಪಾನ ಅಥವಾ ದ್ರವ್ಯಗಳ ಸೇವನೆಯಿಂದ ಉಂಟಾದ ಸಾವು ಅಥವಾ ಅಂಗವಿಕಲತೆ.

3) ನೈಸರ್ಗಿಕ ಸಾವು ಹಾಗೂ ಬೆಂಕಿ ಅಪಘಾತ, ಸಿಡಿಲು, ಬಿರುಗಾಳಿ, ಪ್ರವಾಹ ಮತ್ತು ವಿದ್ಯುತ್ ಅಪಘಾತ.
4) ಮತಿಭ್ರಮಣೆಯಿಂದ ಉಂಟಾದ ಸಾವು ಮತ್ತು ಅಂಗವಿಕಲತೆ.
5) ಗಲಬೆ ಅಥವಾ ದೊಂಬಿಗಳಲ್ಲಿ ಪಾಲ್ಗೊಳ್ಳುವಿಕೆಯಿಂದ ಉಂಟಾದ ಸಾವು ಅಥವಾ ಅಂಗವಿಕಲತೆ.
6) ಕೃಷಿ ಉತ್ಪನ್ನ ಮಾರಾಟ ನಿಯಂತ್ರಣ ಶಾಸನ 1966 ಷಡ್ಯೂಲ್ ನಲ್ಲಿರುವ ಉತ್ಪನ್ನಗಳ ಹೊರತುಪಡಿಸಿದ್ದ ಚಟುವಟಿಕೆ.

## ಋಗಿ ) ಅರ್ಜಿ ಸಲ್ಲಿಸುವ ವಿಧಾನ:-

ಅಂಗವಿಕಲತೆ ಉಂಟಾದ ಸಂಧರ್ಬದಲ್ಲಿ ಅಂಗವಿಕಲತೆ ಉಂಟಾದ ವ್ಯಕ್ತಿ, ಸಾವು ಉಂಟಾದ ಸಂಧರ್ಬದಲ್ಲಿ ಆ ವ್ಯಕ್ತಿಯ ಕುಟುಂಬದ ವಾರಸುದಾರರು ಅರ್ಜಿ ಸಲ್ಲಿಸಲು ಅರ್ಹತೆ ಇರುತ್ತದೆ. ಅಪಘಾತ ಸಂಭವಿಸಿದ 60 ದಿವಸಗಳ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ಸಾವು ಅಥವಾ ಅಂಗವಿಕಲತೆ ಉಂಟಾದ ವ್ಯಕ್ತಿಯು ವಾಸವಾಗಿರುವ ಕ್ಷೇತ್ರದಲ್ಲಿ ಬರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಅರ್ಜಿದಾರರ ಭಾವಚಿತ್ರದೊಂದಿಗೆ ಅರ್ಜಿ ಸಲ್ಲಿಸಬೇಕು.

## ೧೧ ) ಅರ್ಜಿದಾರರು ಒದಗಿಸಬೇಕಾದ ದಾಖಲೆಗಳು:-

(ಮರಣ ಹೊಂದಿದಾಗ)

1) ನಿಗಧಿತ ನಮೂನೆಯಲ್ಲಿ ಅರ್ಜಿ, ಮೂರು ಪ್ರತಿಗಳಲ್ಲಿ.
2) ಪೋಟೋ ಮೂರು ಪ್ರತಿಗಳು.
3) ಪೋಲೀಸ್ ಮಹಜರ್.
4) ವೈಧ್ಯಕೀಯ ಶವ ಪರೀಕ್ಷಾ ವರದಿ.
5) ಮರಣ ಪ್ರಮಾಣ ಪತ್ರ.
6) ಆರ್.ಟಿ.ಸಿ (ಪಹಣಿ)
7) ತಹಶೀಲ್ದಾರ್‌ರಿಂದ ಪಡೆದ ಸಣ್ಣ ಹಿಡುವಳಿದಾರರ ಪ್ರಮಾಣ ಪತ್ರ.
8) ಜನ್ಮ ದಿನಾಂಕಕ್ಕೆ ಸಂಬಂಧಿಸಿದಂತೆ ಶಾಲಾ ಪ್ರಮಾಣ ಪತ್ರ/ ಮತದಾರರ ಗುರುತಿನ ಚೀಟಿ.
9) ವಾಸಸ್ಥಳ ದೃಢೀಕರಣ ಪತ್ರ.
10) ತಹಶೀಲ್ದಾರ್‌ರಿಂದ ಪಡೆದ ಕುಟುಂಬ ಸದಸ್ಯರ ದೃಢೀಕರಣ ಪ್ರಮಾಣ ಪತ್ರ.
11) ವಂಶವೃಕ್ಷ.

ಶಾಶ್ವತ ಅಂಗವಿಕಲತೆ ಉಂಟಾದಾಗ

1) ನಿಗದಿತ ನಮೂನೆಯಲ್ಲಿ ಅರ್ಜಿ, ಮೂರು ಪ್ರತಿಗಳಲ್ಲಿ.
೨) ಫೋಟೋ ಮೂರು ಪ್ರತಿಗಳು.
೩) ಅಂಗವಿಲಕತೆ ಉಂಟಾಗಿದ್ದಲ್ಲಿ ಶಾಶ್ವತ ಅಂಗವಿಕಲತೆ ಉಂಟಾಗಿರುವ ಬಗ್ಗೆ ಸರ್ಕಾರಿ ವೈದ್ಯಾಧಿಕಾರಿಗಳಿಂದ ಪಡೆದ ಶಾಶ್ವತ ಅಂಗವಿಕಲತಾ ಪ್ರಮಾಣ ಪತ್ರ.
4) ತಹಶೀಲ್ದಾರ್‌ರಿಂದ ಪಡೆದ ಸಣ್ಣ ಹಿಡುವಳಿದಾರರ ಪ್ರಮಾಣ ಪತ್ರ.
5) ವಾಸಸ್ಥಳ ದೃಢೀಕರಣ ಪತ್ರ.
6) ಜನ್ಮ ದಿನಾಂಕಕ್ಕೆ ಸಂಬಂಧಿಸಿದಂತೆ ಶಾಲಾ ಪ್ರಮಾಣ ಪತ್ರ/ ಮತದಾರರ ಗುರುತಿನ ಚೀಟಿ.
೭) ಆರ್.ಟಿ.ಸಿ (ಪಹಣಿ)
೮) ವೈಧ್ಯಾಧಿಕಾರಿಗಳ ದೃಢೀಕರಣ ಪತ್ರ.
೯) ವಂಶವೃಕ್ಷ.

# -:ಜನಶ್ರೀ ವಿಮಾ ಯೋಜನೆ:-

ಭಾರತ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಸಹಯೋಗದೊಂದಿಗೆ ಭಾರತೀಯ ಜೀವ ವಿಮಾ ನಿಗಮದ ಮೂಲಕ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿರುವ ಶ್ರಮಿಕರಾದ ಹಮಾಲರು, ಚಕ್ಕಡಿಯವರು ಹಾಗೂ ತೂಕದವರ ಸಾಮಾಜಿಕ ಭದ್ರತೆಗಾಗಿ ಜನಶ್ರೀ ವಿಮಾ ಯೋಜನೆ

## ಯೋಜನೆಯ ಮುಖ್ಯಾಂಶಗಳು:-

1) ಸದಸ್ಯರಾಗಲು ಹಮಾಲರು, ತೂಕದವರು ಹಾಗೂ ಚಕ್ಕಡಿಯವರು ಮಾರಾಟ ಸಮಿತಿಗಳಿಂದ ಲೈಸೆನ್ಸ್ ಪಡೆದಿರತಕ್ಕದ್ದು.
2) ಸದಸ್ಯರು 18 ರಿಂದ 59 ವರ್ಷದೊಳಗೆ ಇರಬೇಕು. ಈ ವಯಸ್ಸು ನಿರ್ಧರಿಸಲು ಶಾಲಾ ದೃಢೀಕರಣ ಪತ್ರ/ ಮತದಾರರ ಗುರುತಿನ ಚೀಟಿಯನ್ನು ಆಧಾರವಾಗಿ ಒದಗಿಸಬೇಕು.
3) ಪ್ರತಿ ಸದಸ್ಯರಿಗೂ 1 ವರ್ಷಕ್ಕೆ ರೂ. 200-00 ಪ್ರೀಮಿಯಂ ಹಣ ಕಟ್ಟಬೇಕಾಗಿರುತ್ತದೆ. ಇದರಲ್ಲಿ ಸದಸ್ಯರು ರೂ. 100-00 ( ಈ ಮೊತ್ತವನ್ನು ಬದಲಾಯಿಸುವ ಹಕ್ಕು ಭಾರತೀಯ ಜೀವ ವಿಮಾ ನಿಗಮಕ್ಕೆ ಇರುತ್ತದೆ) ಪಾವತಿಸಿದರೆ ಸಾಕು, ಮಿಕ್ಕ ಹಣ ರೂ. 100-00 ನ್ನು ಭಾರತ ಸರ್ಕಾರದ ಸಾಮಾಜಿಕ ನಿಧಿಯಿಂದ ಸಬ್ಸಿಡಿಯಾಗಿ ಲಭ್ಯವಾಗುತ್ತದೆ.
4) ಯೋಜನೆಯ ಪಾಲಿಸಿ 1 ವರ್ಷಕ್ಕೆ ಮಾತ್ರ. ಯೋಜನೆಯಲ್ಲಿ ಮುಂದುವರೆಯಲು ಪ್ರತಿ ವರ್ಷ ಶ್ರಮಿಕರು ತಮ್ಮ ವಿಮಾ ಕಂತನ್ನು ಪಾವತಿಸಬೇಕು.
5) ಈ ಯೋಜನೆಯ ಪಾಲಿಸಿಯು 1 ವರ್ಷಕ್ಕೆ ಮಾತ್ರ ಇರುವುದರಿಂದ ಈ ಯೋಜನೆಯಲ್ಲಿ ಕಂತು ಮರುಪಾವತಿ/ ಸರೆಂಡರ್ ಮೌಲ್ಯ/ ಮೆಚ್ಯೂರಿಟಿ ಮೌಲ್ಯ ಮುಂತಾದವುಗಳು ಲಭ್ಯವಾಗುವುದಿಲ್ಲ.
6) ಶ್ರಮಿಕರು ಪ್ರತಿ ಆರ್ಥಿಕ ವರ್ಷ, ವರ್ಷ ಪ್ರಾರಂಭವಾಗುವ ಸಾಕಷ್ಟು ಪೂರ್ವದಲ್ಲೇ ವಿಮಾ ಕಂತಿನ ಹಣ ಹಾಗೂ ತಮ್ಮ ಎಲ್ಲಾ ವಿವರಗಳನ್ನು ಹಾಗೂ ಅವರ ವಾರಸುದಾರರ ವಿವರಗಳನ್ನು ನಿಗಧಿತ ನಮೂನೆಗಳಲ್ಲಿ ಭರ್ತಿ ಮಾಡಿ ಸಂಬಂಧಿಸಿದ ಮಾರುಕಟ್ಟೆ ಸಮಿತಿಗಳಿಗೆ ಸಲ್ಲಿಸತಕ್ಕದ್ದು.

## ವಿಮಾ ಪರಿಹಾರ:-

1) ಸ್ವಾಭಾವಿಕ ಮರಣ ಹೊಂದಿದಾಗ ರೂ. 30,000-00.
2) ಅಪಘಾತದಿಂದ ಶಾಶ್ವತ ಅಂಗವಿಕಲತೆ ಅಥವಾ ಮರಣ ಹೊಂದಿದಾಗ ರೂ. 75,000-00.
3) ಅಪಘಾತದಿಂದ ಭಾಗಶಃ ಶಾಶ್ವತ ಅಂಗವಿಕಲತೆ ಸಂಭವಿಸಿದಾಗ ರೂ. 37,500-00.

## ವಿಶೇಷ ಸೌಲಭ್ಯ:-

★ ವಿಮಗೆ ಒಳಪಟ್ಟ ಶ್ರಮಿಕ ಸದಸ್ಯರು 9,10,11 ಮತ್ತು 12 ನೇ ತರಗತಿಯಲ್ಲಿ ಓದುವ ಗರಿಷ್ಠ ಇಬ್ಬರು ಮಕ್ಕಳಿಗೆ ಯಾವುದೇ ಶುಲ್ಕವಿಲ್ಲದ ಪ್ರತಿ ವರ್ಷ 3 ತಿಂಗಳಿಗೊಮ್ಮೆ ರೂ. 300-00 ದರದಲ್ಲಿ ಶಿಷ್ಯ ವೇತನ ಲಭ್ಯವಾಗುತ್ತದೆ.